ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ

ದಿನಾಂಕ : DATE : 1/4/21

ಸಂಪಾದಕೀಯ
EDITORIAL

# ಒಳಜಗಳಗಳು ಸಾಕು

## ರಾಜ್ಯದ ಅಭಿವೃದ್ಧಿ ಬೇಕು

ತಮ್ಮ ಇಲಾಖೆಯ ಕಾರ್ಯ ನಿರ್ವಹಣೆಯಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ರಾಜ್ಯಪಾಲರು ಹಾಗೂ ಬಿಜೆಪಿ ಹೈಕಮಾಂಡ್‌ಗೆ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ದೂರು ಸಲ್ಲಿಸಿದ್ದಾರೆ. ಇದು ಹಲವು ದಿನಗಳಿಂದ ಇಬ್ಬರ ನಡುವೆ ನಡೆಯುತ್ತಿದ್ದ ಶೀತಲ ಸಮರದ ಸ್ಫೋಟ. ಸಂಪುಟದ ಇತರ ಸದಸ್ಯರ ಇಲಾಖೆಯಲ್ಲಿ ಮುಖ್ಯಮಂತ್ರಿ ನೇರ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ಹೇಳಿರುವ ಈಶ್ವರಪ್ಪ, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಅವರಿಗೂ ಪತ್ರ ಬರೆದಿದ್ದಾರೆ. ಸಚಿವ ಸಂಪುಟ ಸಭೆಯ ನಿರ್ಣಯಗಳನ್ನು ಉಪೇಕ್ಷಿಸಿ ಸಿಎಂ ತಮ್ಮದೇ ನಿರ್ಧಾರ ತೆಗೆದುಕೊಳ್ಳುತ್ತಾರೆ. 'ಗ್ರಾಮೀಣ ಸುಮಾರ್ಗ' ಯೋಜನೆಗೆ ಮೀಸಲಾದ 780 ಕೋಟಿ ರೂ.ಗಳನ್ನು ಹಲವು ಬಾರಿ ಪತ್ರ ಬರೆದರೂ ಬಿಡುಗಡೆ ಮಾಡಿಲ್ಲ. ಸಚಿವನಾದ ತನ್ನ ಗಮನಕ್ಕೆ ತರದೆ ಗ್ರಾಮೀಣ ರಸ್ತೆಗೆ ತಾವೇ ದೊಡ್ಡ ಮೊತ್ತದ ಅನುದಾನ ಬಿಡುಗಡೆ ಮಾಡಿದ್ದಾರೆ. ಆಡಳಿತ ಪಕ್ಷಕ್ಕಿಂತ ಬೇರೆ ಪಕ್ಷದವರ ಕ್ಷೇತ್ರಗಳಿಗೆ ಹೆಚ್ಚು ಅನುದಾನ ನೀಡಲಾಗುತ್ತಿದೆ ಎಂದೆಲ್ಲ ಈ ಪತ್ರದಲ್ಲಿ ದೂರಿದ್ದಾರೆ.





ಸಿಎಂ ವಿರುದ್ಧ ಸಂಪುಟದ ಹಿರಿಯ ಸದಸ್ಯರೊಬ್ಬರು ರಾಜ್ಯಪಾಲರು ಮತ್ತು ಪಕ್ಷದ ವರಿಷ್ಠರಿಗೆ ದೂರು ನೀಡಿರುವುದು ಅಪರೂಪದ ಬೆಳವಣಿಗೆ. ಬಿಎಸ್‌ವೈ ಮತ್ತು ಈಶ್ವರಪ್ಪ ನಡುವಿನ ಹಳೆಯ ವೈಮನಸ್ಸು ಎಲ್ಲರಿಗೂ ಗೊತ್ತಿದ್ದದ್ದೇ. ಆದರೆ ಪಕ್ಷದ ಕಾರಣದಿಂದ ಇಬ್ಬರೂ ಹೊಂದಿಕೊಂಡಿದ್ದರು. ಸದ್ಯ ಅದು ಕೂಡ ಮುರಿದುಬಿದ್ದು ವಿರಸವೇ ಪ್ರಧಾನವಾಗಿ ಗೋಚರಿಸಿದೆ. ಸಿಎಂ ಅವರನ್ನು ದೂರುತ್ತಿರುವವರಲ್ಲಿ ಈಶ್ವರಪ್ಪ ಹೊಸಬರೇನೂ ಅಲ್ಲ. ಈ ಹಿಂದೆ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಕೂಡ ಲಿಂಗಾಯಿತ ಮೀಸಲು ಇತ್ಯಾದಿ ವಿಚಾರಗಳಿಗೆ ಸಂಬಂಧಿಸಿ ಯಡಿಯೂರಪ್ಪನವರನ್ನು ಟೀಕಿಸಿದ್ದಾರೆ. ಟೀಕೆ ಮಾತ್ರವಲ್ಲ, ತಾನೂ ಸಿಎಂ ಸ್ಥಾನದ ಆಕಾಂಕ್ಷಿ ಎಂದೆಲ್ಲ ಹೇಳಿಕೊಂಡು, ರಾಜ್ಯ ಬಿಜೆಪಿಯೊಳಗೇ ಇರುವ ಅನಧಿಕೃತ ಪ್ರತಿಪಕ್ಷದಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದು, ಆಡಳಿತ ಪಕ್ಷದಲ್ಲಿ ಎಲ್ಲ ಸರಿಯಾಗಿಲ್ಲ ಎಂಬುದರ ದ್ಯೋತಕ.

ಕಳೆದ ಸಲದ ಚುನಾವಣೆಯಲ್ಲಿ ಸರಕಾರ ರಚಿಸಲು ಅಗತ್ಯವಾದ ಶಾಸಕಬಲ ಪಡೆಯದ ಬಿಜೆಪಿ, ನಂತರ ಹೇಗೋ ಆಪರೇಶನ್ ಇತ್ಯಾದಿಗಳ ಮೂಲಕ ಅಧಿಕಾರ ಹಿಡಿಯಿತು. ಇದು ಕೆಲವರ ಪಾಲಿಗೆ 'ಆಪರೇಶನ್ ಯಶಸ್ವಿ, ಪೇಷೆಂಟ್ ಮರಣ' ಎಂಬಂತಾಗಿದ್ದರೂ ಸರಕಾರವಂತೂ ರಚನೆಯಾಯಿತು. ಶಾಸಕರು ಅಯೋಗ್ಯರು-ಅತೃಪ್ತರು ಎನ್ನುವಲ್ಲಿ, ನ್ಯಾಯಾಂಗ ಹೋರಾಟದಲ್ಲಿಯೇ ತಿಂಗಳುಗಳು ಕಳೆದವು. ಆಡಳಿತ ಟೇಕಾಫ್ ಆಗಬೇಕು ಅನ್ನುವಷ್ಟರಲ್ಲಿ ಒಂದು ಸುತ್ತಿನ ಉಪಚುನಾವಣೆಗಳು ಬಂದವು. ನೀತಿಸಂಹಿತೆಯಿಂದಾಗಿ ಅಭಿವೃದ್ಧಿ ಕೆಲಸಗಳು ಆಗಲಿಲ್ಲ. ಆದಾದ ಕೂಡಲೇ ಕೊರೊನಾ ಬಂತು, ಲಾಕ್‌ಡೌನ್ ಹೇರಲಾಯಿತು. ಆಗಂತೂ ರಾಜ್ಯದಲ್ಲಿ ಒಂದು ಹುಲ್ಲುಕಡ್ಡಿಯೂ ಅಲುಗಾಡಲಿಲ್ಲ. ಲಾಕ್‌ಡೌನ್ ಹಂತಹಂತವಾಗಿ ತೆರವಾಗಿ, ಇನ್ನೇನು ಅಭಿವೃದ್ಧಿ ಚಟುವಟಿಕೆಗಳು ಆರಂಭವಾಗಬೇಕು ಅನ್ನುವಷ್ಟರಲ್ಲಿ ಜಾರಕಿಹೊಳಿ ಅವರ ಸಿಡಿ ಪ್ರಕರಣ ಭುಗಿಲೆದ್ದು, ಅದರ ಕೋಲಾಹಲದಲ್ಲಿ ವಿಧಾನಸಭೆ ಕಲಾಪವೂ ಕೊಚ್ಚಿಹೋಯಿತು. ಅದರ ಜೊತೆಗೇ ಬೆಳಗಾವಿ ಮುಂತಾದ ಉಪಚುನಾವಣೆಗಳಿಂದಾಗಿ ಆಡಳಿತ ಹಾಗೂ ಪ್ರತಿಪಕ್ಷಗಳ ಗಮನವೆಲ್ಲ ಅತ್ತ ಹರಿದಿದೆ. ಅದರ ಜೊತೆಗೆ ಯತ್ನಾಳ್‌ರಂಥವರ ಪ್ರತಿರೋಧ; ಈಶ್ವರಪ್ಪನವರ ಬಂಡಾಯ. ಇದೆಲ್ಲದರ ನಡುವೆ ಸುಗಮ ಆಡಳಿತ, ಸೌಲಭ್ಯವಂಚಿತರಿಗೆ ಸ್ಪಂದನೆ, ಕೊರೊನಾದಿಂದ ತತ್ತರಿಸಿದ ವಲಯಗಳ ಚೇತರಿಕೆ, ಮೂಲಸೌಕರ್ಯಗಳ ಅಭಿವೃದ್ಧಿ- ಇವೆಲ್ಲವೂ ಮರೀಚಿಕೆಯಾಗಿಯೇ ಉಳಿದಿವೆ. ಯತ್ನಾಳ್ ಮೇಲೆ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದ ಮಾತು ಕೂಡ ಹುಸಿಯಾಗಿದೆ. ನಾಯಕತ್ವದ ಪ್ರಶ್ನೆಯನ್ನು ಹೈಕಮಾಂಡ್ ಅಡ್ಡಗೋಡೆಯ ಮೇಲೇ ಇಟ್ಟಿದೆ; ಹೀಗಾಗಿ ರಾಜ್ಯ ಬಿಜೆಪಿ ನಾಯಕರು- ಕಾರ್ಯಕರ್ತರು ಕೂಡ ಸಿಎಂ ಮೇಲೆ ಪೂರ್ತಿ ಭರವಸೆಯಿಡಲಾಗದೆ ನಿಶ್ಚೇತನರಾಗಿದ್ದಾರೆ. ಇದೆಲ್ಲ ಸರಿಹೋಗುವುದೆಂದು? ರಾಜ್ಯ ಜನತೆಯನ್ನು 'ಟೇಕನ್ ಫಾರ್ ಗ್ರಾಂಟೆಡ್' ಆಗಿ ತಿಳಿದುಕೊಂಡಿರುವ ನಮ್ಮ ಜನಪ್ರತಿನಿಧಿಗಳು, ಒಳಜಗಳಗಳನ್ನು ಬಿಟ್ಟು, ಆಡಳಿತದಲ್ಲಿ ತಮ್ಮ ಉತ್ತರದಾಯಿತ್ವವನ್ನು ಮೆರೆಯುವುದನ್ನು ಜನತೆ ಅಪೇಕ್ಷಿಸುತ್ತಿದ್ದಾರೆ.